iii) ವಿಷಯ: ಕೊರಟಗೆರೆ ಪಟ್ಟಣದಲ್ಲಿ ಶಾದಿಮಹಲ್ ಕಟ್ಟಡ ನಿರ್ಮಾಣದ ಕಾಮಗಾರಿಯು ಅನುದಾನ ಕೊರತೆಯಿಂದ ಪೂರ್ಣ ಗೊಳ್ಳದಿರುವುದರಿಂದ ಮುಸ್ಲಿಂ ಬಾಂಧವರಿಗೆ ತೊಂದರೆಯಾಗಿರುವ ಬಗ್ಗೆ

ಶ್ರೀ ಪಿ.ಆರ್. ಸುಧಾಕರ್ ಲಾಲ್(ಕೊರಟಗೆರೆ):– ಮಾನ್ಯ ಅಧ್ಯಕ್ಷರೆ, ಕೊರಟಗೆರೆ ಪಟ್ಟಣದಲ್ಲಿ ಶಾದಿಮಹಲ್ ಕಟ್ಟಡ ನಿರ್ಮಾಣದ ಕಾಮಗಾರಿಯು ಅನುದಾನ ಕೊರತೆಯಿಂದ ಪೂರ್ಣಗೊಳ್ಳದಿರುವುದರಿಂದ ಮುಸ್ಲಿಂ ಬಾಂಧವರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಖಮರುಲ್ ಇಸ್ಲಾಂ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):– ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಕೊರಟಗೆರೆ ಪಟ್ಟಣದಲ್ಲಿ ಜಾಮಿಯಾ ಮಸಿದಿ ಸಂಸ್ಥೆ ವತಿಯಿಂದ ಶಾದಿಮಹಲ್ ನಿರ್ಮಿಸಲು ಸರ್ಕಾರಿ ಆದೇಶ ಸಂಖ್ಯೆ: ಸಕಇ 91 ಅಸಂಯೋ 2006, ದಿನಾಂಕ: 17.07.2006 ರನ್ವಯ ಹಾಗೂ ಕಟ್ಟಡದ ಅಂದಾಜು ವೆಚ್ಚ ₹ 38.00 ಲಕ್ಷಗಳಿಗೆ ₹ 19.00 ಲಕ್ಷಗಳನ್ನು ಮಂಜೂರು ಮಾಡಿ ಬಿಡುಗಡೆ ಮಾಡಲಾಗಿದೆ. ಉಳಿದ ಅನುದಾನವನ್ನು ಸಂಸ್ಥೆಯವರೇ ಭರಿಸಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಸರ್ಕಾರದಿಂದ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಲು ಬರುವುದಿಲ್ಲ.

ಮಾನ್ಯ ಅಧ್ಯಕ್ಷರೆ, 2007ರಲ್ಲಿ, scheme ಪ್ರಕಾರ ಪೂರ್ತಿ ಹಣ release ಆಗಿದೆ. ಶಾದಿಮಹಲ್ construction‌ಗೆ estimate ಮಾಡಿರುವುದು 38 ಲಕ್ಷ ರೂಪಾಯಿಯಾಗಿದ್ದು, ಅದರಲ್ಲಿ ಅರ್ಧ ಹಣ 19 ಲಕ್ಷ ರೂಪಾಯಿ release ಆಗಿದೆ. ಇನ್ನು ಅರ್ಧ, they should construct from their own funds. Scheme ಪ್ರಕಾರ ಪೂರ್ತಿ ಹಣ release ಆಗಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಅಧ್ಯಕ್ಷರೆ, ಇದು ಎಲ್ಲರಿಗೂ ಸಂಬಂಧಪಟ್ಟ ವಿಚಾರ ಇದೆ. 50 ಲಕ್ಷ ತಾಲ್ಲೂಕಿಗೆ ಕೊಡಬೇಕು, 50 ಲಕ್ಷ ರೂಪಾಯಿ ಜಿಲ್ಲೆಗೆ ಕೊಡಬೇಕೆಂದು ಇದೆ. ಅದನ್ನು ಎಲ್ಲಾ ಕಡೆಗೆ ಕೊಡುವ ಹಾಗೆ ಮಾಡಿ. ಕಾಯಿದೆ ಮತ್ತು ಕಾನೂನು ಹೇಳುತ್ತಾರೆ, ಆದರೆ ರಿಲೀಸ್ ಆಗುತ್ತಿಲ್ಲ.

ಅಧ್ಯಕ್ಷರು:– ಈಗ ಗುರು ಪಾಟೀಲ್ ಶಿರವಾಳರವರು ಕೇಳಿ.

ಶ್ರೀ ಗುರು ಪಾಟೀಲ್ ಶಿರವಾಳ:– ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಕೃಷ್ಣಾ ಭಾಗ್ಯ ಜಲ ನಿಗಮದ ನಾರಾಯಣಪುರ ಎಡದಂಡೆ ಕಾಲುವೆ, ಶಹಾಪುರ ಬ್ರಾಂಚ್ ಕಾಲುವೆ ಇದೆ.

ಅಧ್ಯಕ್ಷರು:– ನೀವು ಕೇಳಿರುವುದು ಅದಲ್ಲ. ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ 'ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ರೈತರಿಗೆ ಸರಿಯಾದ ಕೂಲಿಯನ್ನು ನೀಡುತ್ತಿಲ್ಲದಿರುವ ಬಗ್ಗೆ ಇದೆ.

ಶ್ರೀ ಗುರು ಪಾಟೀಲ್ ಶಿರವಾಳ:– ಮಾನ್ಯ ಅಧ್ಯಕ್ಷರೆ, ಇದೂ ಕೂಡ ಒಂದು ಕೊಟ್ಟಿದ್ದೇನೆ.

ಅಧ್ಯಕ್ಷರು:– ಅದಲ್ಲ. ಇದನ್ನು ಕೇಳಿ.